## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 490

ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 16.12.2021

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ನೇಮಕಾತಿ ಅಧಿಸೂಚನೆಗೆ ಅನುಗುಣವಾಗಿ ಆಗ ಜಾರಿ ಇದ್ದ ಹಳೆಯ ಪಿಂಚಣಿ ಯೋಜನೆ ಅನ್ವಯ ಅರ್ಜಿ ಸಲ್ಲಿಸಿ ಎನ್.ಪಿ.ಎಸ್. ಜಾರಿಗೆ ಬಂದ ನಂತರ ಸೇವೆಗೆ ಸೇರಿದ ನೌಕರರಿಗೆ ನೇಮಕಾತಿ ಅಧಿಸೂಚನೆಗೆ ಅನುಗುಣವಾಗಿ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಮಾನ್ಯ ದೆಹಲಿ ಉಚ್ಚನ್ಯಾಯಾಲಯ ವಿವಿಧ ತೀರ್ಪುಗಳಿಗೆ ಅನುಗುಣವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ: 23568/2019 (ಡೈರಿ ಸಂಖ್ಯೆ: 31539/2019) ದಿನಾಂಕ: 27.09.2019 ಮತ್ತು ಅದೇ ಕೇಸ್‌ನ ರೀವಿವ್ ಪಿಟಿಷನ್ ಸಂಖ್ಯೆ: 21889/2019 ದಿನಾಂಕ: 24.11.2020 ಆದೇಶಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆಯೇ; | ಇಲ್ಲ. |
| ಆ) | ಈ ಮೇಲಿನ ರೀತಿಯ ಸಾವಿರಾರು ಪ್ರಕರಣಗಳು ನಮ್ಮ ರಾಜ್ಯದಲ್ಲಿಯೂ ಇದ್ದು ಅವುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶಗಳಂತೆ ನೇಮಕಾತಿ ಅಧಿಸೂಚನೆಗೆ ಅನುಗುಣವಾಗಿ ಆಗ ಜಾರಿ ಇದ್ದ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದು; ಕ್ರಮವಹಿಸದೇ ಇದ್ದಲ್ಲಿ ಕಾರಣಗಳನ್ನು ಒದಗಿಸುವುದು; | ಅನ್ವಯಿಸುವುದಿಲ್ಲ. |
| ಇ) | ಸರ್ಕಾರ ಈ ಬಗ್ಗೆ ಇನ್ನು ಕ್ರಮವಹಿಸಬೇಕಾಗಿದ್ದಲ್ಲಿ ಎಷ್ಟು ಅವಧಿಯೊಳಗೆ ಈ ಮೇಲಿನ ಪ್ರಕರಣಗಳಿಗೆ ಒಳಪಡುವ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಲಾಗುವುದು; | ಅನ್ವಯಿಸುವುದಿಲ್ಲ. |



Generated from eOffice by G JAGADEESHA, CMO-JS(GJ), JOINT SECREATRY, CMO on 14/12/2021 07:09 PM

| | | |
|---|---|---|
| ಈ) | ನೇಮಕಾತಿ ಅಧಿಸೂಚನೆಯ ಸಂದರ್ಭದಲ್ಲಿ ಜಾರಿ ಇದ್ದ ಹಳೆಯ ಪಿಂಚಣಿ ಯೋಜನೆ ಅನ್ವಯ ಅರ್ಜಿ ಸಲ್ಲಿಸಿ 01.04.2006ರ ನಂತರ ಸರ್ಕಾರದ ಸೇವೆಗೆ ಸೇರಿದ (ನೂತನ ಪಿಂಚಣಿ ಯೋಜನೆಗೆ ಸೇರಿದ) ನೌಕರರ ಸಂಖ್ಯೆ ಎಷ್ಟು? (ಇಲಾಖಾವಾರು ವಿವರ ನೀಡುವುದು) | ರಾಜ್ಯ ಸರ್ಕಾರದಲ್ಲಿ ದಿನಾಂಕ: 01.04.2006ರ ಪೂರ್ವದಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿದ್ದರೂ ಸಹ ನೇಮಕಾತಿ ಆದೇಶ ಪಡೆದು ಸೇವೆಗೆ ಹಾಜರಾದ ದಿನಾಂಕದಂದು ಚಾಲ್ತಿಯಲ್ಲಿರುವ ಸೇವಾ ನಿಯಮಗಳು ಅನ್ವಯವಾಗುವುದರಿಂದ ದಿನಾಂಕ: 01.04.2006ರ ನಂತರ ಸರ್ಕಾರದ ಸೇವೆಗೆ ಸೇರಿದ ನೌಕರರು ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತಾರೆ. |

ಆಇ 257 ಪಿಇಎನ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 14/12/2021 07:09 PM